By www.FREEganita.com.

**ಮಾಹಿತಿ ಹಕ್ಕು ಕಾಯಿದೆ 2005**

1. ಕೇಂದ್ರ/ರಾಜ್ಯ ಸರಕಾರಗಳ ವಿವಿಧ ಇಲಾಖೆಗಳು.
2. ಕೇಂದ್ರ/ರಾಜ್ಯ ಸರಕಾರಗಳಿಂದ ಅನುದಾನ ಪಡೆಯುವ ಸಂಸ್ಥೆಗಳು
 (ಉದಾ: ಐ ಐ ಟಿ/ ಐ ಐ ಎಂ ವಿಶ್ವ ವಿದ್ಯಾಲಯಗಳು... )
3. ಕೇಂದ್ರ/ರಾಜ್ಯ ಸರಕಾರಗಳ ಸ್ವಾಧೀನ ದಲ್ಲಿ ನಡೆಸಲ್ಪಡುವ ಸಂಸ್ಥೆಗಳು
 (ಉದಾ: ಬಿ ಎಸ್ ಎನ್ ಎಲ್/ ಒ ಎನ್ ಜಿ ಸಿ/ ಬಿ ಇ ಎಮ್ ಎಲ್, ರೇಷ್ಮೆ ಕಾರ್ಖಾನೆ ಮೈಸೂರು, ಗಂದಧ ಕಾರ್ಖಾನೆ ಮೈಸೂರು, ಸಕ್ಕರೆ ಕಾರ್ಖಾನೆ ಮಂಡ್ಯ . . .)
4. ಸರ್ಕಾರದ ಹಿಡಿತದಲ್ಲಿದ್ದು ಸಾರ್ವಜನಿಕ ಹಿತಕ್ಕಾಗಿರುವ ಸೇವಾ ನಿರತ ಸಂಸ್ಥೆಗಳು
 (ಉದಾ: ಗ್ರಾಮ/ನಗರ/ಜಿಲ್ಲಾ ಪಂಚಾಯತ್, ಜಿಲ್ಲಾ ಪರಿಷತ್,ನಗರ ಸಭೆ, ನಗರ ಪಾಲಿಕೆ, ವಿದ್ಯುಚ್ಛಕ್ತಿ ಮಂಡಳಿಗಳು..)
5. ಸರ್ಕಾರದಿಂದ ಸೌಲಭ್ಯ ಪಡೆದ ಸಾರ್ವಜನಿಕರ ಉಪಯೋಗಕ್ಕಾಗಿ ಇರುವ ಖಾಸಗಿ ಸಂಸ್ಥೆಗಳು
 (ಉದಾ: ಬೆಂಗಳೂರು ವಿಮಾನ ನಿಲ್ದಾಣ)
6. ಸಾರ್ವಜನಿಕರ ಹಿತಕ್ಕಾಗಿ ಇರುವ ಖಾಸಗಿ ಸಂಸ್ಥೆಗಳ ಕಾರ್ಯಗಳು(ಸರಕಾರೀ ಇಲಾಖೆಗಳ ಮೂಲಕ)
 (ಶಿಕ್ಷಣ ಸಂಸ್ಥೆಗಳ ಕಾರ್ಯ ವೈಖರಿ, ತ್ಯಾಜ್ಯ ವಸ್ತು ಸಂಸ್ಕರಣ ಘಟಕಗಳು . .)
7. ಕೇಂದ್ರ/ರಾಜ್ಯ ಸರಕಾರಗಳ ವಿವಿಧ ಇಲಾಖೆಗಳು.
8. ಕೇಂದ್ರ/ರಾಜ್ಯ ಸರಕಾರಗಳಿಂದ ಅನುದಾನ ಪಡೆಯುವ ಸಂಸ್ಥೆಗಳು
 (ಉದಾ: ಐ ಐ ಟಿ/ ಐ ಐ ಎಂ ವಿಶ್ವ ವಿದ್ಯಾಲಯಗಳು... )
9. ಕೇಂದ್ರ/ರಾಜ್ಯ ಸರಕಾರಗಳ ಸ್ವಾಧೀನ ದಲ್ಲಿ ನಡೆಸಲ್ಪಡುವ ಸಂಸ್ಥೆಗಳು
 (ಉದಾ: ಬಿ ಎಸ್ ಎನ್ ಎಲ್/ ಒ ಎನ್ ಜಿ ಸಿ/ ಬಿ ಇ ಎಮ್ ಎಲ್, ರೇಷ್ಮೆ ಕಾರ್ಖಾನೆ ಮೈಸೂರು, ಗಂದಧ ಕಾರ್ಖಾನೆ ಮೈಸೂರು, ಸಕ್ಕರೆ ಕಾರ್ಖಾನೆ ಮಂಡ್ಯ . . .)

By www.FREEganita.com.

10. ಸರ್ಕಾರದ ಹಿಡಿತದಲ್ಲಿದ್ದು ಸಾರ್ವಜನಿಕ ಹಿತಕ್ಕಾಗಿರುವ ಸೇವಾ ನಿರತ ಸಂಸ್ಥೆಗಳು (ಉದಾ: ಗ್ರಾಮ/ನಗರ/ಜಿಲ್ಲಾ ಪಂಚಾಯತ್, ಜಿಲ್ಲಾ ಪರಿಷತ್,ನಗರ ಸಭೆ, ನಗರ ಪಾಲಿಕೆ, ವಿದ್ಯುಚ್ಛಕ್ತಿ ಮಂಡಳಿಗಳು..)
11. ಸರ್ಕಾರದಿಂದ ಸೌಲಭ್ಯ ಪಡೆದ ಸಾರ್ವಜನಿಕರ ಉಪಯೋಗಕ್ಕಾಗಿ ಇರುವ ಖಾಸಗಿ ಸಂಸ್ಥೆಗಳು (ಉದಾ: ಬೆಂಗಳೂರು ವಿಮಾನ ನಿಲ್ದಾಣ)
12. ಸಾರ್ವಜನಿಕರ ಹಿತಕ್ಕಾಗಿ ಇರುವ ಖಾಸಗಿ ಸಂಸ್ಥೆಗಳ ಕಾರ್ಯಗಳು(ಸರಕಾರೀ ಇಲಾಖೆಗಳ ಮೂಲಕ)
    (ಶಿಕ್ಷಣ ಸಂಸ್ಥೆಗಳ ಕಾರ್ಯ ವೈಖರಿ, ತ್ಯಾಜ್ಯ ವಸ್ತು ಸಂಸ್ಕರಣ ಘಟಕಗಳು . .)

By www.FREEganita.com.

**ಮಾಹಿತಿ ಎಂದರೆ ಏನು?**

1. ಮಾಹಿತಿ ಎಂದರೆ ಯಾವುದೇ ದಾಖಲೆ, ಪತ್ರ, ಇ ಮೈಲ್, ಅಭಿಪ್ರಾಯ, ಉಪದೇಶ, ಪತ್ರಿಕಾ ಪ್ರಕಟಣೆ, ಸುತ್ತೋಲೆ, ಆದೇಶ, ವರದಿ, ಮಾದರಿ ಇತ್ಯಾದಿ ಏನಾದರೂ ಆಗಿರಬಹುದು ಮತು ಯಾವುದೇ ರೀತಿಯಲ್ಲೂ ಇರಬಹುದು.
2. ದಾಖಲೆ ಮತ್ತು ಕಾಗದದ ಪತ್ರಗಳನ್ನು ಕಾಗದ/ ಆಡಿಯೋ/ವೀಡಿಯೋ, ಕ್ಯಾಸೆಟ್ ರೂಪದಲ್ಲಾಗಲೀ ಅಥವಾ ಇನ್ನಿತರ ರೂಪದಲ್ಲಾಗಲಿ ಕೇಳಬಹುದು ಇಲ್ಲಾ ಖುದ್ದಾಗಿ ಕಛೇರಿಯಲ್ಲಿ ಅವುಗಳನ್ನು ಪರಿಶೀಲಿಸಬಹುದು/ಬರೆದು ಕೊಳ್ಳಬಹುದು.
3. ಕೇಳಿರುವ ಮಾಹಿತಿ ರಾಷ್ಟ್ರೀಯ ಭದ್ರತೆಗೆ ಧಕ್ಕೆ ಬರುವಂತಿದ್ದರೆ, ಅಥವಾ ವಾಣಿಜ್ಯ/ವೈಜ್ಞಾನಿಕ ಗೋಪ್ಯತೆಗೆ ಭಂಗ ಬರುವಂತಿದ್ದರೆ, ಅಥವಾ ನ್ಯಾಯಾಲಯಗಳನ್ನು ಮಾಹಿತಿ ನೀಡಬಾರೆದು ಎಂದು ಆದೇಶಿಸಿದ್ದರೆ ಮತ್ತು ಇನ್ನಿತರ ಸೂಕ್ಷ್ಮ ಕಾರಣವಿದ್ದಲ್ಲಿ ಮಾತ್ರ ಸಂಬಂಧಿಸಿದ ಸಂಸ್ಥೆಗಳು ಮಾಹಿತಿ ನೀಡುವುದನ್ನು ನಿರಾಕರಿಸಬಹುದು. ಅಂತಹ ಸಂದರ್ಭಗಳಲ್ಲಿ ಕಾರಣಗಳನ್ನು ನೀಡಲೇ ಬೇಕು.
4. ಮಾಹಿತಿ ಏಕೆ ಬೇಕು ಎಂದು ಅರ್ಜಿಯಲ್ಲಿ ನಮೂದಿಸಬೇಕಾಗಿಲ್ಲ ಹಾಗೂ ಅಧಿಕಾರಿಯೂ ಮಾಹಿತಿ ಏಕೆ ಬೇಕು ಎಂದು ಕೇಳುವಂತಿಲ್ಲ.

By www.FREEganita.com.

ಮೇಲ್ಮನವಿ ಸಲ್ಲಿಸಲು ಇರುವ ಅವಕಾಶಗಳು:

ರಾಷ್ಟ್ರೀಯ ಮಾಹಿತಿ ಕಮಿಶನರ್

↑

ರಾಜ್ಯ ಮಾಹಿತಿ ಕಮಿಶನರ್

↑

ಸಂಸ್ಥೆಯ ಸಂಪರ್ಕಾಧಿಕಾರಿ

↑

ಇಲಾಖಾ/ಸ್ಥಳೀಯ ಸಾರ್ವಜನಿಕ ಮಾಹಿತಿ ಅಧಿಕಾರಿ

By www.FREEganita.com.

**ಮಾಹಿತಿ ಪಡೆಯುವಲ್ಲಿನ ವಿವಿಧ ಹಂತಗಳು;**

1. 10 ರೂ ಶುಲ್ಕವನ್ನು(ಬಡವರಿಗೆ ವಿನಾಯಿತಿ) ನಗದು/ಡ್ರಾಫ್ಟ್/ಪೋಸ್ಟಲ್ ಆರ್ಡರ್ ಮೂಲಕ ಪಾವತಿ ಮಾಡಿ ವಿವರಗಳನ್ನು ನಿಗದಿತ ಅರ್ಜಿ ನಮೂನೆಯಲ್ಲಿ ತುಂಬಿ ಸಂಬಂಧಿಸಿದ ಅಧಿಕಾರಿಗೆ ನೀಡಬೇಕು.
2. ಸಾಮಾನ್ಯವಾಗಿ 30 ದಿನಗಳ ಒಳಗೆ ವಿವರಗಳನ್ನು ಸಂಬಂಧಿಸಿದ ಅಧಿಕಾರಿ ನೀಡಬೇಕು ಅಥವಾ ವಿಷಯ ಬೇರೆ ಇಲಾಖೆಗೆ ಸಂಬಂಧ ಪಟ್ಟಿದ್ದರೆ ಅದನ್ನು ಎಲ್ಲಿಂದ ಪಡೆಯಬಹುದು ಎಂದು 5 ದಿನಗಳ ಒಳಗೆ ತಿಳಿಸಬೇಕು. ಮಾಹಿತಿ ಒಬ್ಬ ವ್ಯಕ್ತಿಯ ಜೀವನ್ಮರಣದ ವಿಷಯಕ್ಕೆ ಸಂಬಂಧಿಸಿದ್ದರೆ 48 ಗಂಟೆಯ ಒಳಗೆ ಮಾಹಿತಿ ಒದಗಿಸಬೇಕು.
3. ನಿರ್ದಿಷ್ಟ ಅವಧಿಯೊಳಗೆ ಮಾಹಿತಿ ನೀಡದಿದ್ದಲ್ಲಿ ಮಾಹಿತಿಯನ್ನು ನಿರಾಕರಿಸಲಾಗಿದೆ ಎಂದು ಪರಿಗಣಿಸಿ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳಬಹುದು.
4. ಒದಗಿಸಬೇಕಾದ ಪ್ರತೀ ಪುಟಕ್ಕೆ ನಿಗದಿ ಪಡಿಸಿದ ದರದಲ್ಲಿ ಪುಟಗಳ ಸಂಖ್ಯೆಗನುಗುಣವಾಗಿ ಹೆಚ್ಚುವರಿ ಹಣವನ್ನು, ವಿವರಗಳನ್ನು ನೀಡಿ ಕಟ್ಟುವಂತೆ ತಿಳಿಸಬಹುದು.
5. ಅರ್ಜಿಯನ್ನು ಸ್ವೀಕರಿಸದಿದ್ದರೆ, ನಿಗದಿತ ಅವಧಿಯಲ್ಲಿ ವಿವರಗಳನ್ನು ನೀಡದಿದ್ದರೆ ಅಥವಾ ಅಸಮರ್ಪಕ/ತಪ್ಪು ಮಾಹಿತಿ ನೀಡಿದ್ದರೆ ಮೇಲಧಿಕಾರಿಗೆ ದೂರು ನೀಡಬಹುದು.
6. ಮೇಲ್ಮನವಿ ಯಾಗಿ ರಾಜ್ಯ ಮಾಹಿತಿ ಕಮಿಷನರ್ ಗೆ ದೂರು ಕೊಡಬಹುದು( ಮಾಹಿತಿ ಕೊಡದಿದ್ದ/ತಪ್ಪು ಮಾಹಿತಿ ಕೊಟ್ಟ ಅಧಿಕಾರಿಯ ಮೇಲೆ ಇವರು ದಿನಕ್ಕೆ 250 ರೂ ಗಳಂತೆ ದಂಡ ವಿಧಿಸಬಹುದು ಹಾಗೂ ಶಿಸ್ತಿನ ಕ್ರಮ ಕೈಗೊಳ್ಳಬಹುದು)

By www.FREEganita.com.

**ಮಾಹಿತಿ ಕೇಳಬಹುದಾದ ಕೆಲವು ಉದಾಹರಣೆಗಳು:**

| ಸಂ | ಕೇಳ ಬಹುದಾದ ವಿವರ | ದೊರೆತ ಮಾಹಿತಿಯ ಉಪಯೋಗ |
|---|---|---|
| 1 | ಚುನಾಯಿತ ವ್ಯಕ್ತಿಗೆ ನೀಡಿದ ಸಂಬಳ, ಭತ್ಯೆಗಳು, ವ್ಯಕ್ತಿಯು ಘೋಷಿಸಿದ ಆಸ್ತಿ ಪಾಸ್ತಿಯ ವಿವರ. | ವ್ಯಕ್ತಿಯು ಅಧಿಕೃತ ಮೂಲಗಳಿಂದ ಹೊರತು ಪಡಿಸಿ ಅಧಿಕ ಆಸ್ತಿ ಪಾಸ್ತಿ ಹೊಂದಿದ್ದರೆ ಸಂಬಂಧಿಸಿದವರಿಗೆ/ ಮೇಲಧಿಕಾರಿಗಳಿಗೆ/ಲೋಕಾಯುಕ್ತರಿಗೆ ದೂರು. |
| 2 | ಯಾವುದೇ ಸರಕಾರೀ ಉದ್ಯೋಗಿಯ ಸಂಬಳ, ಭತ್ಯೆಗಳ ವಿವರ. | |
| 3 | ಚುನಾಯಿತ ವ್ಯಕ್ತಿಯು ಸಂಬಂಧಿಸಿದ ಸಭೆಯಲ್ಲಿ(ವಿಧಾನ /ಲೋಕ) ಹಾಜರಾಗಿದ್ದ ದಿನಗಳು, ಆ ವ್ಯಕ್ತಿಯು ಕೇಳಿದ ಪ್ರಶ್ನೆಗಳ ವಿವರ. | ಸದನಗಳ ಕಾರ್ಯಕಲಾಪಗಳಲ್ಲಿ ವ್ಯಕ್ತಿಯ ಸಕ್ರಿಯತೆಯ ಬಗ್ಗೆ ತಿಳಿಯಬಹುದು. |
| 4 | ಹಳ್ಳಿಯ/ನಗರದ ಸಂಸ್ಥೆಗಳು ಸಾರ್ವಜನಿಕರಿಗಾಗಿ ಕೈಕೊಂಡ ಕಾರ್ಯಕ್ರಮಗಳ/ಕಾಮಗಾರಿಗಳ ಆಮೂಲಾಗ್ರ ವಿವರ:<br>ರಸ್ತೆ ದುರಸ್ತಿಗೆ, ಶಾಲಾ ಕಟ್ಟಡ ಕಟ್ಟಲಿಕ್ಕೆ, ಸೇತುವೆ ನಿರ್ಮಾಣಕ್ಕೆ ಮಂಜೂರಾದ ಹಣ, ನಿಗದಿ ಪಡಿಸಿದ ಕಾಮಗಾರಿಯ ಗುಣ ಮಟ್ಟ , ಗುತ್ತಿಗೆದಾರರನ್ನು ಆಯ್ಕೆ ಮಾಡಿದ ಕ್ರಮ, ಗುತ್ತಿಗೆ ದಾರನಿಗೆ ಪಾವತಿ ಮಾಡಿದ ಹಣದ ವಿವರ . . . | ಏನಾದರೂ ಅಕ್ರಮ ನಡೆದಿದ್ದರೆ/ಸ್ವಜನ ಪಕ್ಷಪಾತ ನಡೆದಿದ್ದರೆ/ಕಳಪೆ ಕಾಮಗಾರಿಯಾಗಿದ್ದರೆ ಜನಾಂದೋಳನ ನಡೆಸಬಹುದು ಇಲ್ಲಾ ಮೇಲಧಿಕಾರಿಗಳಿಗೆ ದೂರು ನೀಡಬಹುದು. |
| 5 | ವಿಶ್ವ ವಿದ್ಯಾನಿಲಯದಿಂದ ಉತ್ತರ ಪತ್ರಿಕೆಗಳ ಪ್ರತಿ (ಬೇರೆಯವರದ್ದೂ ಕೂಡ). | ಸ್ವಜನ ಪಕ್ಷಪಾತ ನಡೆದಿದ್ದರೆ ಅದರ ತಿದ್ದುಪಡಿ ಮತ್ತು ಸಂಬಂಧಿಸಿದ ಅಧ್ಯಾಪಕರ ಮೇಲೆ ಕ್ರಮ. |

By www.FREEganita.com.

| | | |
|---|---|---|
| 6 | ಅಭ್ಯರ್ಥಿಗಳನ್ನು ಕೆಲಸಕ್ಕೆ ಆಯ್ಕೆಗಾಗಿ ನಿಗದಿಪಡಿಸಿದ ಮಾನದಂಡ, ಆಯ್ಕೆ ಮಾಡಿದ ವಿಧಾನ ಮತ್ತು ಅವರು ಗಳಿಸಿದ ಅಂಕಗಳು. | ಸ್ವಜನ ಪಕ್ಷಪಾತ ನಡೆದಿದ್ದರೆ ಅದರ ತಿದ್ದುಪಡಿ ಮತ್ತು ಸಂಬಂಧಿಸಿದ ಆಯ್ಕೆ ಸಮಿತಿಯ ಮೇಲೆ ಕ್ರಮ. |
| 7 | ಬೇರೆಯವರು ಪಾವಿತಿಸಿದ ಕಂದಾಯದ ವಿವರ ( ಮನೆ, ಆಸ್ತಿ ) : ಬಾಡಿಗೆಗೆ ನೀಡಿದ ಸ್ವತ್ತು. | ಅನ್ಯಾಯವಾಗಿದ್ದಲ್ಲಿ ಅದರ ಸರಿಪಡಿಸುವಿಕೆ. |
| 8 | ಯಾವುದೇ ಕಟ್ಟಡವನ್ನು ಕಟ್ಟಲು ಪಂಚಾಯಿತಿ/ಪಾಲಿಕೆ/ಅಭಿವೃದ್ಧಿ ಪ್ರಾಧಿಕಾರ ಮಂಜೂರು ಮಾಡಿದ ನಕ್ಷೆ ಮತ್ತಿತರ ವಿವರಗಳು. | ಮಂಜೂರಾದ ನಕ್ಷೆ ನಿಯಮಗಳಿಗೆ ವಿರುದ್ಧವಾಗಿದ್ದರೆ, ಅಥವಾ<br>ಕಟ್ಟುತ್ತಿರುವ ಕಟ್ಟಡ ನಕ್ಷೆಯಂತಿರದಿದ್ದರೆ, ನ್ಯಾಯಾಲಯಕ್ಕೆ ಮೊರೆ ಹೋಗದೆ ಕಟ್ಟಡ ಕಟ್ಟದಿರುವಂತೆ ತಡೆಯಾಜ್ಞೆ ತರಬಹುದು. |
| 8 | ಸರಕಾರದ ವಿವಿಧ ಯೋಜನೆಯಡಿ ಕಾಮಗಾರಿಗಳಿಗೆ/ಜನಹಿತ ಯೋಜನೆಗಳಿಗೆ ಒದಗಿಸಿದ ಹಣ, ಫಲಾನುಭವಿಗಳ ವಿವರ, ಖರ್ಚು ಮಾಡಿದ ಹಣದ ವಿವರ. | ಅನ್ಯಾಯವಾಗಿದ್ದಲ್ಲಿ ಅದರ ಸರಿಪಡಿಸುವಿಕೆ. |
| 9 | ವಸತಿಗಾಗಿ ನಿಗದಿಪಡಿಸಿರುವ ಸ್ಥಳಗಳಲ್ಲಿ ವಸತಿಯೇತರ ಕಟ್ಟಡದ ನಿರ್ಮಾಣ. | 'ನಿವೇಶನದ ಉಪಯೋಗತ್ವ' ದ ಬದಲಾವಣೆ ಇಲ್ಲದೇ ವಾಣಿಜ್ಯ ಕಟ್ಟಡ ಕಟ್ಟಿದ್ದರೆ ನಿರ್ಮಾಣಕ್ಕೆ ತಡೆ |

By www.FREEganita.com.

**ಪ್ರಮುಖ ಘಟನೆಗಳು ಮತ್ತು ಅವುಗಳ ಪರಿಣಾಮ:**

1. ಇಂಡಿಯನ್ ಇನ್ಸ್ಟಿಟ್ಯೂಟ್ ಟೆಕ್ನಾಲಜಿ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್. ಸಂಸ್ಥೆಗಳಲ್ಲಿನ ಪ್ರವೇಶದ ಆಯ್ಕೆಯ ವಿಧಾನದ ಬಹಿರಂಗ.
2. ನಿಯಮಕ್ಕೆ ಮೀರಿ ನಗರ ಪಾಲಿಕೆಯ ಅಧಿಕಾರಿಗಳೊಂದಿಗಿ ಶಾಮೀಲಾಗಿ ಬಹು ಮಹಡಿಯ ವಸತಿ ಕಟ್ಟಡ(ಫ್ಲಾಟ್) ದ ನಿರ್ಮಾಣಕ್ಕೆ ಸುತ್ತಮುತ್ತಲಿನ ನಿವಾಸಿಗಳಿಂದ ಅರ್ಧದಲ್ಲೇ ತಡೆ.(ಬೆಂಗಳೂರಿನ ಜಯನಗರ)
3. 'ಕೂಲಿಗಾಗಿ ಕಾಳು' ಯೋಜನೆಯಡಿ ನಡೆಯುತ್ತಿದ್ದ ಅವ್ಯವಹಾರದ ತಡೆ(ಛತ್ತೀಸ ಗಢ ರಾಜ್ಯ)
4. ನಿಗದಿತ ಸಮಯದಲ್ಲಿ ಮತ್ತು ಗುಣಮಟ್ಟದ ಪಡಿತರ ಆಹಾರದ ವಿತರಣೆ (ಚನ್ನಗಿರಿ ಗ್ರಾಮ)
5. ಬಡಾವಣೆಯ ರಸ್ತೆಗಳಿಗೆ ಟಾರು ( ಬೆಂಗಳೂರಿನ ಎಲ್ ಬಿ ಎಸ್ ಬಡಾವಣೆ)
6. ಅಂತರ್ಜಾಲದಲ್ಲಿ ಬೆಂಗಳೂರು ನಗರ ಪಾಲಿಕೆಯ ಎಲ್ಲಾ ಉದ್ಯೋಗಿಗಳ ಸಂಬಳದ ವಿವರ

ಮೇಲೆ ತಿಳಿಸಿರುವುದು ಕೆಲವೇ ಉದಾಹರಣೆಗಳಾಗಿದ್ದು ಅಂತಹವು ಬಹಳ ಇವೆ. ಈ ಕಾಯಿದೆಯಿಂದ ಏನೆಲ್ಲ ಅನ್ಯಾಯ/ಅಕ್ರಮ ನಡೆಯುವುದನ್ನು ತಪ್ಪಿಸಬಹುದು ಎನ್ನುವುದು ವ್ಯಕ್ತಿಯ ಊಹೆಗೆ ಬಿಟ್ಟಿದ್ದು.

By www.FREEganita.com.

ಮಾದರಿ ಅರ್ಜಿ:

**ನಮೂನೆ** ಎ **(**2005 : **ಸೆಕ್ಶನ್** 6(1),7(1))

1. ಅರ್ಜಿದಾರನ ಹೆಸರು
2. ಅರ್ಜಿದಾರನ ವಿಳಾಸ
3. ಯಾವ ವಿವರಗಳು(ದಾಖಲೆ/ವಿಷಯ/ನಮೂನೆ) ಬೇಕಾಗಿವೆ(ಪ್ರತಿಗಳು ಬೇಡವಾದಲ್ಲಿ ಯಾವ ಕಡತ ಗಳನ್ನು ನೋಡಬೇಕೆಂದೂ ತಿಳಿಸಬಹುದು)
4. ಮಾಹಿತಿ ನೀಡಬೇಕಾದ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹುದ್ದೆ ಮತ್ತು ವಿಳಾಸ

ಸ್ಥಳ :
ದಿನಾಂಕ :

ಸಹಿ

ಹೆಚ್ಚಿನ ಮತ್ತು ಇತ್ತೀಚಿನ ವಿವರಗಳಿಗೆ

http://www.kic.gov.in/karnataka_rules.html
www.rti.gov.in